


### ಗಮನಸೆಳೆಯಿತು

‘ಐಪಿಎಲ್ ತರುಣರ ದಂಡು’, ಗಿರೀಶ ದೊಡ್ಡಮನಿ ಅವರ ಮುಖಪುಟ ಲೇಖನ (ಸುಧಾ, ಏ. 20) ಮಾಹಿತಿಪೂರ್ಣ ವಾಗಿತ್ತು. ಐಪಿಎಲ್ ಕ್ರಿಕೆಟ್ ಯಾವ ರೀತಿ ಶುರು ಆಯಿತು, ಅದರ ಮಹತ್ವ ಏನು ಎಂಬ ವಿವರ ಗಮನಸೆಳೆಯಿತು. ತರುಣರ ಕ್ರಿಕೆಟ್ ಪ್ರೀತಿಯ ಅನಾವರಣವೂ ಲೇಖನದಿಂದ ಆಯಿತು.

—ಪಿ.ಗೋವಿಂದರಾಜ್ ಶಿವಮೊಗ್ಗ,
ಸಿ.ಪಿ.ಕೆ. ಮೈಸೂರು

### ಅರ್ಥಗರ್ಭಿತ

‘ವಿಚಾರ ಲಹರಿ’ಯಲ್ಲಿ ‘ವಿಶ್ವ ಪ್ರಜೆ ವಿಶ್ವ ಪ್ರಜ್ಞೆ’ (ತೋಪ) ಶೀರ್ಷಿಕೆಯೇ ಆಕರ್ಷಕ, ಅರ್ಥಗರ್ಭಿತ. ವಿಚಾರ ಲಹರಿ ಓದಿದ ಮೇಲೆ ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕಾದಂಬರಿ ಓದುವ ಉತ್ಸುಕತೆ ಬರುತ್ತದೆ.

—ಕೆ.ಎಂ. ಮಧ್ವರಾಯ ಬೆಂಗಳೂರು

### ಚಿಂತನಾರ್ಹ ಬರಹ

‘ನಿಮ್ಮೊಡನೆ’ಯಲ್ಲಿ ‘ಷೋ ಮತ್ತು ರಿಯಾಲಿಟಿ’ (ಬಿ.ಎಂ ಹನೀಫ್)ಬರಹ ಚಿಂತನಾರ್ಹ. ಕಿರುತೆರೆಗೆ ಬಿಗ್‌ಬಾಸ್‌ನಲ್ಲಿ ಪರಿಚಯವಾದುದರಿಂದ ಮೊದಲ್ಗೊಂಡು ಹುಚ್ಚಾಟವನ್ನು ಪ್ರದರ್ಶಿಸುವಲ್ಲಿ, ಬಹುಮಾನದ ನಂತರ ಮಾನಸಿಕ ಸ್ಥಿಮಿತ ತಪ್ಪಿ ಮೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವ ಪ್ರಥಮ್. ಕಿರಿತೆರೆಯ ಈ ಕಾರ್ಯಕ್ರಮದಿಂದ ಸ್ಥಿಮಿತವಿಲ್ಲದ ವ್ಯಕ್ತಿಯಿಂದ ನಾಗರಿಕ ಸಮಾಜಕ್ಕೆ ಆಗುವ ಉಪಯೋಗವೇನು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಬರಹ ಸಮಯೋಚಿತವೂ ಆಗಿದೆ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ,
ಮಹಾವೀರ ಕಾಸರ ಶಿವಮೊಗ್ಗ

### ಪ್ರವಾಸ ಲೇಖನ

‘ಕತಾರ್ ಕೊರ್ನೀಶ್’ (ಗೀತಾ ಕುಂದಾಪುರ) ಪ್ರವಾಸ ಲೇಖನ ಚೆನ್ನಾಗಿದೆ. ಅರ್ಧ ಚಂದ್ರಾಕಾರದ ಸಮುದ್ರ ತೀರವಾಗಿರುವ ಕತಾರ್ ಕೊರ್ನೀಶ್ ಎಂಟು ಕಿಮೀ ಉದ್ದವಿದೆ ಎಂಬ ಮಾಹಿತಿ ಸಿಕ್ಕಿತು. ಚಿತ್ರಗಳು ಕಣ್ಮನ ಸೆಳೆದವು.

—ರವೀಂದ್ರನಾಥ ಶಿ. ಯಡಹಳ್ಳಿ, ಸತ್ಯನಾರಾಯಣ ಬೆಂಗಳೂರು

### ಮನಮುಟ್ಟಿದ ಕಥೆ

ಕಥೆ ‘ಶಾಂತಿ’ (ಆಶಾ ಹೆಗಡೆ) ಮನಮುಟ್ಟುವಂತಿತ್ತು. ದೇಶ ಕಾಯಲು ಹೋದ ಗಂಡ ಮರಳಿ ಬಾರದ ಲೋಕಕ್ಕೆ ಹೋಗಿದ್ದರಿಂದ ಮನನೊಂದ ಶಾಂತಿಯ ಮಗನೂ ದೇಶಸೇವೆಗೆ ಹೋಗಲು ನಿರ್ಧರಿಸಿದ್ದು ವಿಪರ್ಯಾಸವೆನಿಸಿತು. ಆದರೆ ಶಾಂತಿಯ ನಿರ್ಧಾರ ಅಚಲ. ದೇವರ ನಿರ್ಧಾರದ ಮೇಲೆ ಬೇರೆಲ್ಲ ಶೂನ್ಯ ಎಂಬುದನ್ನು ಕಥೆ ತಿಳಿಸಿದೆ.

—ಬಾಳುಪೇಟೆ ನೀಲಕಂಠಪ್ಪ ಹಾಸನ, ಶಿವಸ್ವಾಮಿ ನೇನೇಕಟ್ಟೆ ಬೆಂಗಳೂರು

### ಸಕಾಲಿಕ ಲೇಖನ

‘ಚೆಲ್ಲದಿರಿ ಆಹಾರ’ (ಸವಿತಾ ಶಾಂತಪ್ರಿಯ) ಲೇಖನ ಸಕಾಲಿಕ ಹಾಗೂ ಈಗಿನ ಕಾಲಕ್ಕೆ ಪ್ರಸ್ತುತವಾಗಿದೆ. ಸಮಾರಂಭಗಳಲ್ಲಿ ಸಾಕಷ್ಟು ಆಹಾರ ಪೋಲಾಗುವುದನ್ನು ನಾವು ಕಣ್ಣಾರೆ ಕಾಣುತ್ತೇವೆ. ಆದರೆ ಅದನ್ನು ತಡೆಗಟ್ಟಲು ಅನುಸರಿಸುವ ಕ್ರಮ ಮಾತ್ರ ಶೂನ್ಯ. ಅಗತ್ಯವಿದ್ದಷ್ಟು ಮಾತ್ರ ಬಡಿಸಿಕೊಂಡು ತಿನ್ನುವ ಸಂಸ್ಕೃತಿ ಪ್ರಜ್ಞೆ ಜನರಲ್ಲಿ ಮೂಡಬೇಕು.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಸುಂದರ್ ಬೆಂಗಳೂರು

### ಉಪಯುಕ್ತ ಮಾಹಿತಿ

‘ಎಲುಬು ಕೀಲಿನ ಟಿಬಿ, ರೋಗ ಲಕ್ಷಣಗಳೇ ಇಲ್ಲದ ವ್ಯಾಧಿ’ ಆರೋಗ್ಯ ಲೇಖನ (ಅನೂಷಾ ಹೊನ್ನೇಕೂಲು) ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಟಿಬಿ ಶ್ವಾಸಕೋಶಕ್ಕೆ ಮಾತ್ರ ಸೀಮಿತ ಎಂದುಕೊಂಡಿದ್ದ ನಮಗೆ, ಇದು ಮೂಳೆ, ಕೀಲುಗಳಿಗೂ ತಗುಲಬಹುದು ಎಂಬುದು ತಿಳಿದಿರಲಿಲ್ಲ. ದೀರ್ಘಕಾಲ ಬೆನ್ನು ನೋವು, ಕೈನೋವುಗಳಿಂದ ಬಳಲುವವರು ಕೂಡಲೇ ಮೂಳೆ ತಜ್ಞರನ್ನು ಭೇಟಿಯಾಗುವುದು ಒಳಿತು.

—ಮಧುರಾ ಸುಬ್ರಹ್ಮಣ್ಯ ಬೆಂಗಳೂರು

### ಎಲ್ಲರೂ ಓದಬೇಕಾದ ಲೇಖನ

‘ಲೌಕಿಕ ಸುಖದ ಗೀಳಿನಲ್ಲಿ..’ (ಎಲ್. ಗಿರಿಜಾರಾಜ್) ಎಲ್ಲರೂ ಓದಲೇ ಬೇಕಾದ ಉತ್ತಮ ಲೇಖನ. ಇಂದಿನ ಸಮಾಜದಲ್ಲಿ, ಸಂಸಾರದಲ್ಲಿ ಅಶಾಂತಿ ಉಂಟಾಗಲು ಕಾರಣ ನಮ್ಮಲ್ಲಿರುವ ಅತಿ ಆಸೆ, ಅತೃಪ್ತಿ ಹಾಗೂ ಬೇಕುಗಳ ಹೆಚ್ಚಳ. ಲೇಖನ ಕೂತುಹಲ್ಲುವ ಪರಾವಲಂಬಿಗಳ ಕಣ್ಣುತೆರೆಯುವಂತಿತ್ತು. ಸುಖದ ಗೀಳನ್ನು ಅಂಟಿಸಿಕೊಂಡ ವ್ಯಕ್ತಿ, ಸ್ವಂತ ಪ್ರಯತ್ನದಿಂದ ಮಾತ್ರ ಸುಖದ ಹಾದಿಯಲ್ಲಿ ಸಾಗಬಲ್ಲ ಎಂಬ ಮಾತು ನಿತ್ಯಸತ್ಯ.

—ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ನಾರಾಯಣಯಾಜಿ ಶಿರಾಲಿ,
ಬಿ.ಎಸ್.ಎನ್.ರಾವ್ ಮಂಡ್ಯ, ಎಂ.ಎಸ್. ಬೆಂಗಳೂರು,
ಶೈಲಜಾ ಭಿಂಗೆ ಬೆಳಗಾವಿ, ರಜಿಯಾ ಮಂಗಳೂರು

### ಚಡಗ ಪ್ರಶಸ್ತಿಗೆ ಆಹ್ವಾನ

ಕೋಟೇಶ್ವರದ ಎನ್.ಆರ್.ಎ.ಎಂ.ಎಚ್ ಪ್ರಕಾಶನ ನೀಡುವ 2017ನೆಯ ಸಾಲಿನ ಚಡಗ ಸ್ಮಾರಕ ಪ್ರಶಸ್ತಿಗಾಗಿ 2016ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ. ಯಾವುದೇ ವಿವಾದಕ್ಕೆಡೆ ಮಾಡದ ಸಾಮಾಜಿಕ ಬದ್ಧತೆಯ ವಸ್ತುವನ್ನು ಕಾದಂಬರಿ ಒಳಗೊಂಡಿರಬೇಕು. ಅನುವಾದಿತ ಕೃತಿಗಳನ್ನು ಸ್ವೀಕರಿಸಲಾಗುವುದಿಲ್ಲ. ಮೇ ತಿಂಗಳ ಕೊನೆಯ ವಾರದೊಳಗೆ ಕೃತಿಯ ನಾಲ್ಕು ಪ್ರತಿಗಳನ್ನು ಕಳಿಸಿ. ಒಮ್ಮೆ ಈ ಪ್ರಶಸ್ತಿ ಪಡೆದವರು ಮತ್ತೆ ಭಾಗವಹಿಸುವಂತಿಲ್ಲ.

ವಿಳಾಸ: ಕೆ.ಶಾರದಾ ಭಟ್, ಸಂಚಾಲಕಿ, ಪ್ರಶಸ್ತಿ ಸಮಿತಿ, 58, ಶಾಂತಾನಂದ ರೆಸಿಡೆನ್ಸಿ, ಮಿಶನ್ ಆಸ್ಪತ್ರೆ ರಸ್ತೆ, ಉಡುಪಿ 576101, ಸಂಪರ್ಕಕ್ಕೆ: 9449233462; 08202535462

## ಓದುಗರ ಗಮನಕ್ಕೆ



ಈ ಮೇಲಿನ ಅಂಚೆ ಕಾರ್ಡ್ ಅನ್ನು ಸೂಕ್ಷ್ಮವಾಗಿ ಗಮನಿಸಿ. ಇದರಲ್ಲಿ ಅಂಚೆ ತಲುಪಬೇಕಾದ ವಿಳಾಸ ಖಾಲಿ ಬಿಡಲಾಗಿದೆ. ಕಳುಹಿಸಿದವರ ಹೆಸರು, ವಿಳಾಸ ದಾಖಲಾಗಿದೆ. ಆದರೂ ಈ ಪತ್ರ ‘ಸುಧಾ’ ಕಚೇರಿ ತಲುಪುವಲ್ಲಿ ಯಶಸ್ವಿಯಾಗಿದೆ. ಹಾಗೆಂದು ಪ್ರತಿಸಲವೂ ಅಂಚೆಯಣ್ಣ ನಿಮಗೆ ಔದಾರ್ಯ ತೋರಿಸುವುದಿಲ್ಲ. ಈ ಪತ್ರದ ಇನ್ನೊಂದು ಬದಿಯಲ್ಲಿ ‘ಸುಧಾ ವಾರಪತ್ರಿಕೆ’ ಎಂಬ ಒಂದು ಶಬ್ದ ಇರುವುದರಿಂದ ಸುರಕ್ಷಿತವಾಗಿ ಬಂದು ತಲುಪಿದೆ. ಲೇಖಕರು ಕಳುಹಿಸುವ ಯಾವುದೇ ಪತ್ರದ ಮೇಲೆ ಸ್ಪಷ್ಟವಾಗಿ ವಿಳಾಸ ಬರೆದು ಯಾವ ವಿಭಾಗಕ್ಕೆ ಎನ್ನುವುದನ್ನೂ ಸ್ಪಷ್ಟವಾಗಿ ನಮೂದಿಸಬೇಕು.

ಕೈಬರಹಕ್ಕಿಂತ ಇಮೇಲ್ ಬರಹಕ್ಕೆ ಹೆಚ್ಚು ಆದ್ಯತೆ ಕೊಡಿ. ಇ–ಮೇಲ್‌ನಲ್ಲಿ ಕಳುಹಿಸುವವರು ಲೇಖನದ ಆರಂಭದಲ್ಲಿ ಅಥವಾ ಕೊನೆಯಲ್ಲಿ ಹೆಸರು, ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆದಿರಬೇಕು. ಹೆಸರು, ವಿಳಾಸ, ಫೋನ್ ನಂಬರ್ ಇಲ್ಲದಿರುವ ಯಾವುದೇ ಬರಹಗಳನ್ನು ಪ್ರಕಟಣೆಗೆ ಸ್ವೀಕರಿಸುವುದಿಲ್ಲ.

– ಸಂ